'ಮುಂಜಾವು' ಚಂದಾ ದರ
ಆಜೀವ ಚಂದಾ ೨೦೦ ರೂ
ವಾರ್ಷಿಕ ಚಂದಾ ೨೦ ರೂ.
ಬಿಡಿ ಪ್ರತಿ ೪೦ ಪೈಸೆ

ಮುಂಜಾವು

ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್
ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೨ನೇ ವರ್ಷ | ೧ನೇ ಸಂಚಿಕೆ | ಭಾನುವಾರ | ೨೧-೮-೧೯೮೩ | ಕೊಪ್ಪ | ಬೆಲೆ ೨೦ ಪೈಸೆ

ಹರಿಹರಪುರ ಕಿರಿಯ ಕಾಲೇಜಿನ ಮುಗಿಯದ ಹಗರಣ:

ಪ್ರಾಚಾರ್ಯರ ಕೊಠಡಿಗೆ ಪೋಷಕರಿಂದ ಬೀಗ

ಹರಿಹರಪುರ: ಇಲ್ಲಿನ ಕಿರಿಯ ಕಾಲೇಜಿನ ಹಗರಣ ಬಗೆಹರಿಯುವ ಬದಲು ದಿನದಿನಕ್ಕೆ ಉಲ್ಬಣವಾಗುತ್ತಿದೆ. ಈಚೆಗೆ ಕೆಲವು ಪೋಷಕರು ಪ್ರಿನ್ಸಿಪಾಲರ ಕೊಠಡಿಗೆ ಬೀಗ ಹಾಕಿದ ಘಟನೆ ಮುಗಿಯದ ಈ ಕಹಿ ಘಟನೆಗಳ ಸರಮಾಲೆಯಲ್ಲಿನ ಹೊಸ ಪ್ರಕರಣ.

ಈವರ್ಷ ಕಾಲೇಜು ಮುಚ್ಚಬೇಕೆಂದು ಆಡಳಿತ ಮಂಡಳಿ ತೆಗೆದುಕೊಂಡಿದ್ದ ನಿರ್ಣಯವನ್ನು ಬದಿಗೆ ಇರಿಸಿ, ಕಾಲೇಜು ಮುಂದುವರಿಸುವ ಬಗ್ಗೆ ಕಳೆದ ತಿಂಗಳು ನಡೆದ ಸಭೆಯಲ್ಲಿ ಒಪ್ಪಲಾಗಿದ್ದ ಒಂದು ನಿರ್ಣಯವನ್ನು ಪ್ರಿನ್ಸಿಪಾಲ್ ಮೀರಿದ್ದಾರೆಂಬ ಆಪಾದನೆಯೇ ಪೋಷಕರ ಈ ಕ್ರಮಕ್ಕೆ ಕಾರಣವೆನ್ನಲಾಗಿದೆ.

ನಿರ್ಣಯ

ಪ್ರಿನ್ಸಿಪಾಲರು ರಜೆ ಹೋಗುವಾಗ ಕಾಲೇಜು ವಿಭಾಗದಲ್ಲಿ ಹಿರಿಯರಾದ ಅಧ್ಯಾಪಕರಿಗೆ ಚಾರ್ಜು ವಹಿಸಿ ಹೋಗಬೇಕೆಂಬುದೇ ಆ ನಿರ್ಣಯ. ಈಬಗ್ಗೆ ಆಡಳಿತ ಮಂಡಳಿ ಇಲಾಖಾ ಆಯುಕ್ತರಿಂದ **ಅಸ್ಪಷ್ಟವಾದ** ಮತ್ತು ತಾತ್ಕಾಲಿಕ ಸ್ವರೂಪದ ಒಂದು ಆದೇಶವನ್ನೂ ಪಡೆದುಕೊಂಡಿದೆ. ಹಿಂದೆ ರಜೆ ಹೋಗುವಾಗ ಪ್ರಿನ್ಸಿಪಾಲರು ಇದರಂತೇ ನಡೆದಿದ್ದರೆಂದೂ ಈಚೆಗೆ ಹಾಗೆ ಮಾಡದೇ ಪ್ರೌಢಶಾಲೆ ವಿಭಾಗದ ಹಿರಿಯ ಅಧ್ಯಾಪಕರಿಗೆ ಚಾರ್ಜು ವಹಿಸಿದರೆಂದೂ ಸದರಿ ಪೋಷಕರ ಹೇಳಿಕೆ.

ವಿರೋಧ

ಆದರೆ, ಈ ನಿರ್ಣಯ ನಿಯಮ ಬಾಹಿರ ಹಾಗೂ ತಮ್ಮ ಸೇವಾಹಿರಿತನ ಮತ್ತು ನಿಯಮ ಬದ್ಧವಾದ ಬಡ್ತಿ ಅವಕಾಶಗಳಿಗೆ ಕಲ್ಲು ಹಾಕುವಂಥದು ಎಂಬುದಾಗಿ ಹಿಂದಿನ ಪ್ರೌಢಶಾಲೆಯ ಹಿರಿಯ ಅಧ್ಯಾಪಕರುಗಳು ಅದನ್ನು ತೀವ್ರವಾಗಿ ವಿರೋಧಿಸುತ್ತಿದ್ದು, ಈ ವಿರೋಧದ ಅಂಗವಾಗಿ ಸಾಮೂಹಿಕ ರಜೆ ಮುಂತಾದ ಕ್ರಮಗಳನ್ನು ತೆಗೆದುಕೊಂಡಿದ್ದರು.

ಡಿ. ಡಿ. ಪಿ. ಐ. ತೀರ್ಪು

ಈ ಬೀಗಮುದ್ರೆ ಪ್ರಕರಣ ಮತ್ತಿತರ ವಿಷಯಗಳ ತನಿಖೆ ನಡೆಸಿದ ಜಿಲ್ಲಾ ಶಿಕ್ಷಣಾಧಿಕಾರಿಯವರು, ವಿದ್ಯಾಸಂಸ್ಥೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶನವೇ ಅಂತಿಮವಾದುದೆಂದೂ, ಈಬಗ್ಗೆ ಬೇಕಾದರೆ ನ್ಯಾಯಾಲಯಕ್ಕೆ ಹೋಗಬಹುದೆಂದೂ, ಸದ್ಯ ಹಳೇ ನಿರ್ಣಯದಂತೆಯೇ ಚಾರ್ಜು ವಹಿಸಬೇಕೆಂದೂ ಆದೇಶಿಸಿರುವುದಾಗಿ ವರದಿಯಾಗಿದೆ.

ಶಿಕ್ಷಣ ಮಣ್ಣುಪಾಲು

ಈ ಹಗರಣಗಳಿಂದಾಗಿ ಪೋಷಕ ವರ್ಗದಲ್ಲೂ ಎರಡು ಗುಂಪುಗಳಾಗಿವೆಯೆಂದು ಹೇಳಲಾಗಿದೆ. **ಅದಕ್ಕಿಂತಲೂ ಮುಖ್ಯವಾಗಿ ವಿದ್ಯಾರ್ಥಿಗಳ ಭವಿಷ್ಯ ದಿನೇ ದಿನೇ ಮಣ್ಣಿಗೆ ಸೇರುತ್ತಿದೆ.**

ಮೋಟರ್ ಬೈಕ್ ಅಪಘಾತ:

ಕಾಲು ಮುರಿತ

ಕೊಪ್ಪ: ಆ. ೧೮ ರಂದು ಇಲ್ಲಿನ ಬಸ್ ನಿಲ್ದಾಣದ ಬಳಿ ಮೈಸೂರ್ ಪ್ಲಾಂಟೇಶನ್‌ಗೆ ಸೇರಿದ ಜೀಪಿಗೆ ಮೋಟರ್ ಬೈಕ್ ಡಿಕ್ಕಿ ಹೊಡೆಸಿದ ಯು. ಬಿ. ಸತ್ಯನಾರಾಯಣ ಎಂಬವರಿಗೆ ಕಾಲು ಮುರಿದು ಮಣಿಪಾಲದ ಆಸ್ಪತ್ರೆಗೆ ಸೇರಿಸಲಾಗಿದೆ.

ನಿಂತಿದ್ದ ಜೀಪನ್ನು ನಿಧಾನವಾಗಿ ಚಲಿಸಿ, ಬಸ್‌ಸ್ಟ್ಯಾಂಡ್ ಕಡೆ ತಿರುಗಿಸುತ್ತಿದ್ದಾಗ ಕೆಳಗಿನ ಪೇಟೆಯ ಕಡೆಯಿಂದ ಎಂಟಿನ ವೇಗದಲ್ಲಿ ಬಂದ ಸತ್ಯನಾರಾಯಣ ಜೀಪಿನ ಚಲನೆ ಗಮನಿಸಲಿಲ್ಲ. ಹತ್ತಿರ ಬಂದ ನಂತರ ತಪ್ಪಿಸಲು ಯತ್ನಿಸಿದರೂ ಆಗದೆ ಜೀಪಿನ ಮುಂಭಾಗಕ್ಕೆ ಭಾರಿ ಶಬ್ದದೊಂದಿಗೆ ಬೈಕ್ ಬಡಿದು ಸವಾರ ಸುಮಾರು ದೂರಕ್ಕೆ ಬಿದ್ದರು ಎಂದು ಪ್ರತ್ಯಕ್ಷದರ್ಶಿಗಳ ಹೇಳಿಕೆ.

ಗಾಯಾಳುವನ್ನು ಕೂಡಲೇ ಮಣಿಪಾಲಕ್ಕೆ ಸಾಗಿಸಲಾಗಿದೆ. ಕಾಲಿನ ಮೂಳೆಗಳು ಮುರಿದ ಕಾರಣ ಗುಣಮುಖವಾಗಲು ಕೆಲ ತಿಂಗಳೇ ಬೇಕಾಗುತ್ತವೆನ್ನಲಾಗಿದೆ.

ವಾಹನ ಮಾಲೀಕರಿಗೆ ಸೂಚನೆ

ವಾಹನ ಮಾಲೀಕರು ಇನ್ನು ಮುಂದೆ ವಾಹನ ತೆರಿಗೆಯನ್ನು ೫ ಅಥವಾ ೧೦ ವರ್ಷಗಳಿಗೆ ಒಂದೇ ಕಂತಿನಲ್ಲಿ ಪಾವತಿ ಮಾಡಬಹುದಾಗಿದೆ.

೫ ವರ್ಷಗಳ ಒಂದು ಕಂತಿನಲ್ಲಿ ತೆರಿಗೆ ಪಾವತಿ ಮಾಡಬಯಸುವವರಿಗೆ ಶೇ. ೫ ರಷ್ಟು ಹಾಗೂ ೧೦ ವರ್ಷಗಳ ಕಂತಿಗೆ ಶೇ. ೧೦ ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಹೆಚ್ಚಿನ ವಿವರಗಳನ್ನು ಚಿಕ್ಕಮಗಳೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದೆಂದು ತಿಳಿಸಲಾಗಿದೆ

ಸ್ವಾತಂತ್ರ್ಯ ದಿನಾಚರಣೆ

ಕೊಪ್ಪ

ಇಲ್ಲಿನ ಎಲ್ಲಾ ಶಾಲಾ ಕಾಲೇಜುಗಳು ಹಾಗೂ ವಿವಿಧ ಇಲಾಖೆಗಳು ಭಾಗವಹಿಸಿದ್ದ ಸ್ವಾತಂತ್ರ್ಯ ದಿನೋತ್ಸವ ಸಮಾರಂಭ ಬಾಳಗಡಿಯ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ನಡೆಯಿತು.

ಇದಕ್ಕೆ ಮೊದಲು ಶಾಲಾ ಮಕ್ಕಳು ಊರಿನಲ್ಲಿ ಪ್ರಭಾತ್ ಫೇರಿಯೊಡನೆ ಅಲ್ಲಿನ ಆಟದ ಬಯಲಿನಲ್ಲಿ ನೆರೆದರು. ತಹಸೀಲ್ದಾರ್ ಹೆಚ್. ಎಂ. ನಾಗಪ್ಪ ಧ್ವಜ ಹಾರಿಸಿದರು. ಎನ್.ಸಿ.ಸಿ., ಸ್ಕೌಟ್, ಗೈಡ್, ಗೃಹರಕ್ಷಕ ದಳ ಮತ್ತು ಪೋಲೀಸರು ಗೌರವ ರಕ್ಷೆ ನೀಡಿದರು.

ಶಾಸಕ ಗೋವಿಂದಗೌಡರು ಸೇರಿದಂತೆ ಹಲವು ಗಣ್ಯರು ಹಾಗೂ ನಾಗರಿಕರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಶೃಂಗೇರಿ

ವಿವಿಧ ಶಾಲೆಗಳ ಮಕ್ಕಳು ಊರಿನ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ತಹಸೀಲ್ದಾರ್ ಭಾಸ್ಕರಾಚಾರ್ಯ ಧ್ವಜಾರೋಹಣ ಮಾಡಿದರು. ಸಂಜೆ ಶಾಲಾ ಮಕ್ಕಳಿಂದ ಮನರಂಜನಾ ಕಾರ್ಯಕ್ರಮಗಳು ನಡೆದವು

ದಲಿತ ಸಂಘರ್ಷ ಸಮಿತಿಯಿಂದ

ಕರಾಳ ದಿನಾಚರಣೆ

ಚಿಕ್ಕಮಗಳೂರು: ಕಪ್ಪು ಬಾವುಟ ಅನಾವರಣ ಮಾಡುವುದರ ಮೂಲಕ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಶಾಖೆ ಆ. ೧೫ ರಂದು ಕರಾಳ ದಿನ ಆಚರಿಸಿತು. ದ.ಸಂ.ಸ. ಅಂದು ರಾಜ್ಯಾದ್ಯಂತ ಕರಾಳ ದಿನ ಆಚರಿಸಲು ಕರೆ ಕೊಟ್ಟಿತ್ತು.

ಸ್ವಾತಂತ್ರ್ಯ ದಲಿತರ ಪಾಲಿಗೆ ಅರ್ಥಹೀನವಾಗಿರುವುದನ್ನೂ, ಕರಾಳ ದಿನಾಚರಣೆ ಆಚರಿಸುವ ಉದ್ದೇಶವನ್ನೂ ವಿವರಿಸಿ ಎಂ. ಡಿ.ಗಂಗಯ್ಯ, ಯು. ಮಂಜಯ್ಯ, ಭದ್ರಯ್ಯ, ದೊರೆಯಪ್ಪ, ಕೆಂ. ಕ. ಕೃಷ್ಣಮೂರ್ತಿ ಮುಂತಾದವರು ಮಾತನಾಡಿದರು.

ವಿಧಾನಸಭೆ ಚುನಾವಣಾ ಕ್ಷೇತ್ರಗಳ ಮತದಾರರ ಹೊಸ ದಾಖಲಾತಿ

ಭಾರತೀಯ ಚುನಾವಣಾ ಆಯೋಗದ ಆದೇಶದಂತೆ, ಎಲ್ಲಾ ವಿಧಾನ ಸಭಾ ಮತದಾರರ ಪಟ್ಟಿಗಳ ತೀವ್ರ ಪರಿಷ್ಕರಣ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕೆಂದು ಕರ್ನಾಟಕ ಸರ್ಕಾರವು ಆದೇಶಿಸಿದ್ದು, ಈ ಬಗ್ಗೆ ಕೊಪ್ಪ ತಹಸೀಲ್ದಾರರು ಈ ಕೆಳಗಿನಂತೆ ಪ್ರಕಟಣೆ ಮಾಡಿದ್ದಾರೆ:

"ದಿನಾಂಕ ೧೯೮೩ರ ಜನವರಿ ೧ ರಂದು ನಿಮ್ಮ ವಯಸ್ಸು ೨೧ ವರ್ಷಕ್ಕಿಂತ ಕಡಿಮೆ ಇರದಿದ್ದಲ್ಲಿ ಮತದಾರರಾಗಿ ನೋಂದಾಯಿಸಲ್ಪಡುವುದಕ್ಕೆ ನೀವು ಅರ್ಹರಾಗುತ್ತೀರಿ. ಆದರೆ ಮತದಾನ ಮಾಡಲು ಅರ್ಹರಾಗಬೇಕಾದರೆ ನಿಮ್ಮ ಹೆಸರು ದಾಖಲಾಗತಕ್ಕದ್ದು. ದಾಖಲಾತಿಗಾಗಿ ವಿವರಗಳನ್ನು ಸಂಗ್ರಹಿಸಲು ಎಣಿಕೆ ದಾರರು ಪ್ರತಿಯೊಂದು ಮನೆಗೆ ಇದೇ ಆಗಸ್ಟ್ ೧೦ ರಿಂದ ೩೧ರ ನಡುವೆ ಭೇಟಿ ನೀಡುತ್ತಾರೆ.

ಎಣಿಕೆದಾರರು ನಿಮ್ಮ ಮನೆಗೆ ಬಂದಾಗ ಅವಶ್ಯವಿರುವ ಮಾಹಿತಿಯನ್ನು ಒದಗಿಸಿ ಸಹಕರಿಸಬೇಕಾಗಿ ವಿನಂತಿ."

ವಿದ್ಯಾರ್ಥಿ ಸಂಘಕ್ಕೆ ಆಯ್ಕೆ

ಕೊಪ್ಪ: ಇಲ್ಲಿನ ಕಿರಿಯ ಕಾಲೇಜಿನ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾಗಿ ಯು. ಬಿ. ಮೋಹನ್ (ಪಿಯುಸಿ) ಹಾಗೂ ಸಹ ಕಾರ್ಯದರ್ಶಿಯಾಗಿ ಉಮೇಶ (ಎಸ್ಸೆಸ್ಸೆಲ್ಸಿ) ಅವರುಗಳೂ, ಅಧ್ಯಾಪಕ ಕಾರ್ಯದರ್ಶಿಯಾಗಿ ಎ. ಜಿ. ಸುಬ್ರಹ್ಮಣ್ಯ ಮತ್ತು ಸಹ ಕಾರ್ಯದರ್ಶಿಯಾಗಿ ಶಿವಪ್ಪಯ್ಯ ಅವರುಗಳೂ ಆಯ್ಕೆಯಾಗಿದ್ದಾರೆ.

ಪಡಿತರ ಅಕ್ಕಿ ಪ್ರಮಾಣ ಹೆಚ್ಚಿಸಲು ಒತ್ತಾಯ

ಕೊಪ್ಪ: ಜನತಾ ಪಕ್ಷದ ನಗರ ಘಟಕದ ಸಭೆ ಅಧ್ಯಕ್ಷ ಕೆ.ವಿ. ಮಂಜುನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಆ. ೧೨ ರಂದು ನಡೆಯಿತು.

ಸಹಕಾರಿ ಸಂಘಗಳ ಮೂಲಕ ಕೊಡುತ್ತಿರುವ ಪಡಿತರ ಅಕ್ಕಿಯನ್ನು ೫ ಕಿಲೋದಿಂದ ೧೫ ಕಿಲೋಗೆ ಹೆಚ್ಚಿಸಬೇಕೆಂದು ಸಭೆ ಒತ್ತಾಯಿಸಿತು.

ಮುಂಬರುವ ಪುರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಹೊರತು ಉಳಿದ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು; ಕೊಪ್ಪದ ಹೋಟೆಲುಗಳು ಅಶುಚಿಯಿಂದ ತುಂಬಿದೆಯೆಂಬ ದೂರನ್ನನುಸರಿಸಿ, ಶುಚಿತ್ವದ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಒತ್ತಾಯ; ಸಾರ್ವಜನಿಕ ಗ್ರಂಥಾಲಯದ ಪಾಲಕರು ವಾರದಲ್ಲಿ ಕೆಲವು ದಿನ ವೇಳೆ ಪಾಲಿಸದಿರುವ ಬಗ್ಗೆ ಜಿಲ್ಲಾ ಗ್ರಂಥಪಾಲಕರಿಗೆ ಕ್ರಮ ತೆಗೆದುಕೊಳ್ಳಲು ಒತ್ತಾಯಿಸುವುದು—ಇವು ಈ ಸಭೆ ಕೈಗೊಂಡ ಇನ್ನಿತರ ತೀರ್ಮಾನಗಳು.

ಓದುಗರ ಪತ್ರಗಳು

ತೆರಿಗೆ ಕಟ್ಟುವುದಕ್ಕೆ ಮಾತ್ರ.....

ಭಾರತೀಯರಲ್ಲಿ ತೆರಿಗೆ ಕಟ್ಟುವ ಪ್ರಜೆಗ ಲ್ಲಿ ಎರಡು ವಿಧ: ಒಂದು—ಕಟ್ಟಿದ ತೆರಿ ಯ ಪೂರ್ಣ ಉಪಯೋಗ ಪಡೆವವರು; ನ್ನೊಂದು—ತೆರಿಗೆ ಮಾತ್ರ ಕಟ್ಟುವವರು.

ಅದರಲ್ಲಿ ಎರಡನೇ ವರ್ಗ ಚಿಟ್ಟಿಮನೆ, ಡಿಗೆ, ಸಿರಿಮನೆ, ಕೊಚ್ಚಾರ್, ಹಂದಿಗ ದ್ದೆ, ಮುಳೇಬೈಲ್, ಸಿಂದೋಡಿ, ಮೊದಲಾ ದ ಹಳ್ಳಿಗಳವರದು. ಈ ಹಳ್ಳಿಗೆ ಸರ್ಕಾರದ ಸಂಬಂಧ ಎಂದರೆ ನಿಗದಿತವಾದ ತೆರಿಗೆ ಕ ಟ್ಟುವುದು ಮಾತ್ರ,

೩೫ ವರ್ಷಗಳಲ್ಲಿ ಈ ಹಳ್ಳಿಗಳು ಅಗತ್ಯ ವಾದ ನೀರು; ಜನತಾ ವಸತಿ (ಅಗತ್ಯವಿದ್ದವ ರಿಗೆ ಮಾತ್ರ), ರಸ್ತೆ, ವಿದ್ಯುಚ್ಛಕ್ತಿ, ಮೊದಲಾದ ಸೇವೆಯಿಂದ ವಂಚಿತರಾಗಿದ್ದಾ ರೆ. ನೂರಾರು ಬಾರಿ ಮಾಡಿಕೊಂಡ ನಳಿನಿ ನದಿಯ ಸೇತುವೆಗೆ ಅರ್ಜಿ ಭಂಡ ಸರ್ಕಾರದ ಆಡಳಿತದ ನಿರ್ವಾಹಕರ ಗಮನಕ್ಕೆ ಬಂದಿಲ್ಲ ರಾಜಕಾರಣಿಗೆ ಇದರ ನೆನಪು ಇಲ್ಲ. ಕಾರ ಣ ಮತ ಕೇಳಲು ಯಾವ ರಾಜಕಾರಣಿಗ ಳು ಇಲ್ಲಿ ಬರುವುದಿಲ್ಲ!

ಸಮಸ್ಯೆ ಈಗ ಇನ್ನೂ ತೀವ್ರವಾಗಲು ಕಾರಣ—ನಳಿನಿ ನದಿಗೆ ಹಾಕಿದ್ದ ಸಂಕ ಮು ರಿದು ಬಿದ್ದಿದೆ. ಗ್ರಾಮಸ್ಥರು ರಿಪೇರಿ ಮಾಡ ಲು ತಯಾರಿಲ್ಲ. ಏಕೆಂದರೆ ನದಿಯ ನೀರು ತುಂಬಿದ ಕಾರಣ ಪ್ರಾಣಾಪಾಯ. ವಿದ್ಯಾ ರ್ಥಿಗಳ, ಜನಸಾಮಾನ್ಯರ ಬವಣೆ ಬಣ್ಣಿಸ ಲಾರದಷ್ಟು. ಗ್ರಾಮಸ್ಥರ ಸೇತುವೆಯು ಕನ ಸು ಗಗನ ಕುಸುಮವಾಗಿ ಉಳಿದಿದೆ. ಸರ್ಕಾ ರ ಬದಲಾದರೇನು ಸಮಸ್ಯೆ ಬದಲಾಗಿಲ್ಲ.

ಅಲ್ಲದೆ ೮೦ ಜನ ಗಿರಿಜನರ ಸ್ವಂತ ಭೂಮಿಗೆ ಸಲ್ಲಿಸಿದ ಸಾಗುವಳಿ ಅರ್ಜಿಗಳು ತಿರಸ್ಕೃತ. ಕೇವಲ ಛತ್ರದ ದರವನ್ನು ಏರಿ ಸುವುದು ಮತ್ತು ಸಾಲ ಮನ್ನ ಮಾಡುವು ದೇ ತನ್ನ ಪರಮೋಚ್ಚ ಗುರಿಯೆಂದು ತಿಳಿ ದಿರುವ ರೈತ ಸಂಘ ಇತ್ತ ಗಮನ ಹರಿಸೀ ತೆ?

ಹುಲಿ ಕಾಟದ ಬಗ್ಗೆ ಇತ್ತೀಚೆಗೆ ಸುಧಾ ವಾರಪತ್ರಿಕೆ ಲೇಖನ ಪ್ರಕಟಿಸಿತ್ತು. ಶಾಸ ಕರು ಕೆರೆಕಟ್ಟೆ ಒಂದು ಕೊಂಪೆ ಎಂದು ತಿ ಳಿದಿದ್ದಾರೆ. ಅದಕ್ಕೂ ಕೊಂಪೆ ಈ ಹಳ್ಳಿಗಳು ಬರುವ ಸಾಲಿನಲ್ಲಾದರೂ ಇಲ್ಲಿಗೆ ವಿದ್ಯು ತ್ ಮತ್ತು ಸೇತುವೆ ಸೌಲಭ್ಯ ಒದಗಿಸು ವರೇ ಎಂದು ಜನ ಕಾತರದಿಂದ ಕಾಯು ತ್ತಿದ್ದಾರೆ.

ಗ್ರಾಮಸ್ಥರ ಪರವಾಗಿ
—ಹಂದಿಗದ್ದೆ ಯೋಗೀಶ.
ಕಿಗ್ಗ.

"ಇವರೂ ಸನ್ಮಾನಕ್ಕೆ ಅರ್ಹರಾಗಿದ್ದರು"

ಈ ತಿಂಗಳು ೨ನೇ ತಾರೀಖು ಶೃಂಗೇರಿ ತಾಲ್ಲೂಕು ಭಾರತೀ ನಗರದಲ್ಲಿ ಹಾಲಂದೂ ರು ಸೇವಾಸಹಕಾರಸಂಘದ ನೂತನ ವ್ಯಾ ಪಾರ ಮಳಿಗೆಯನ್ನು ಶಾಸಕರು ಉದ್ಘಾಟಿ ಸಿದ ಸಂದರ್ಭದಲ್ಲಿ, ಸುಮಾರು ೧೮ ವರ್ಷ ಕ್ಕೂ ಮೇಲ್ಪಟ್ಟು ಈ ಸಂಸ್ಥೆಯ ಅಧ್ಯಕ್ಷ ರಾಗಿ ಅದರ ಶ್ರೇಯಸ್ಸಿಗೆ ದುಡಿದ ಶ್ರೀಯುತ ಕೆ. ಸೀತಾರಾಮಭಟ್ಟ, ಕಿರಕೋಡು, ಇವ ರನ್ನು ಸನ್ಮಾನಿಸಿರುವುದು ನಿಜಕ್ಕೂ ಅಭಿ ನಂದನಾರ್ಹ. ಆದರೆ ಇದೇ ರೀತಿ ಗೌರವ ಕಾರ್ಯದರ್ಶಿಗಳಾಗಿ ಅಷ್ಟೇ ಕಾಲ ದುಡಿದ ಶ್ರೀಯುತ ಕೆ. ಶ್ರೀನಿವಾಸಭಟ್ಟ, ಕಿರಕೋ ಡು, ಇವರು ಈ ಸಮಯದಲ್ಲಿ ನೆನಪಿಗೆ ಬಾರ ದಿದ್ದುದೂ, ಅವರು ಅದೇ ಸಭೆಯಲ್ಲಿ ಉಪ ಸ್ಥಿತರಿದ್ದೂ ಅವರ ಬಗ್ಗೆ ಚಕಾರ ಎತ್ತದಿದ್ದು ದೂ ಸಂಬಂಧಪಟ್ಟವರ ಔದಾಸೀನ್ಯವನ್ನೂ, ಕರ್ತವ್ಯ ಲೋಪವನ್ನೂ ಎತ್ತಿ ತೋರಿಸು ತ್ತದೆ.

ಶ್ರೀಯುತ ಸೀತಾರಾಮಭಟ್ಟರಷ್ಟೇ ಶ್ರೀ ನಿವಾಸಭಟ್ಟರೂ ಸನ್ಮಾನಕ್ಕೆ ಅರ್ಹರಾಗಿದ್ದ ರೆಂದು ಈ ಮೂಲಕ ಸಂಬಂಧ ಪಟ್ಟವರಿಗೆ ತಿಳಿಸಲು ಬಯಸುತ್ತೇನೆ.

—ನೊಂದ ಗ್ರಾಮಸ್ಥರ ಪರವಾಗಿ,
ಕೆ. ಜಿ. ಕೃಷ್ಣಯ್ಯ, ಕಿರಕೋಡು.

ಅಭಿನಂದನೆ

ರಾಜ್ಯ ಸರ್ಕಾರವು ಶೃಂಗೇರಿ ತಾಲೂ ಕಿನ ನಾಯಕರುಗಳಾದ ಮಾಣಿಬೈಲು ಪು ಟ್ಟಸ್ವಾಮಿ, ಕೆ.ಎಂ.ಶ್ರೀನಿವಾಸ್, ಕೆ.ಆರ್ ದೇವೇಂದ್ರ ಹೆಗ್ಡೆ ಇವರುಗಳನ್ನ ಸರ್ಕಾರದ ವಿವಿಧ ಸಮಿತಿಗಳಿಗೆ ನೇಮಿಸಿರುವುದು ಅವ ರುಗಳ ಪ್ರತಿಭೆಗೆ ತಕ್ಕ ಪುರಸ್ಕಾರವಲ್ಲದೆ ತಾಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಿದೆ. ಶ್ರೀಯುತರುಗಳ ನೇ ಮಕವನ್ನು ಹಾರ್ದಿಕವಾಗಿ ಸ್ವಾಗತಿಸುತ್ತಾ ಶ್ರೀಯುತರುಗಳ ಸೇವೆಯು ಪ್ರಾಮಾಣಿಕ ವಾಗಿರಲಿ ಎಂದು ಕೋರುತ್ತೇನೆ. ನೇಮ ಕಾತಿಗೆ ಸೂಚಿಸಿದ ಮಾನ್ಯ ಶಾಸಕರಿಗೂ, ನೇಮಕಾತಿ ಹೊಂದಿದ ಶ್ರೀಯುತರುಗಳಿ ಗೂ ಅಭಿನಂದನೆಗಳು.

—ಎಸ್. ವೆಂಕಟೇಶ್
ಕಾರ್ಯದರ್ಶಿ, ಆರ್ಯ ಈಡಿಗರ ಸಂಘ
ಶೃಂಗೇರಿ ತಾಲ್ಲೂಕ್.

ಗ್ರಾಮೀಣ ಮಹಿಳೆಯರ, ಮಕ್ಕಳ ಶ್ರೇಯೋಭಿವೃದ್ಧಿ ಯೋಜನೆಗೆ

ನ. ರಾ. ಪುರ ಆಯ್ಕೆ

ಚಿಕ್ಕಮಗಳೂರು: ವಿಶ್ವಸಂಸ್ಥೆಯ(ಯುನಿಸೆಫ್‌ನ) ಸಹಕಾರದೊಂದಿಗೆ ಗ್ರಾಮೀ ಣ ಮಹಿಳೆಯರ ಮತ್ತು ಮಕ್ಕಳ ಶ್ರೇಯೋ ಭಿ ವೃದ್ಧಿ ಗಾಗಿ ಸರ್ಕಾರ ಬಿಜಾಪುರ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಆಯ್ದ ತಾ|| ಗ ಳಲ್ಲಿ ಜಾರಿಗೆ ತರಲಿರುವ ಯೋಜನೆಯಂತೆ; ನ. ರಾ. ಪುರ ಮತ್ತು ತರೀಕೆರೆ ತಾ|| ಗಳ ನ್ನು ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಆಯ್ಕೆ ಮಾಡಿದೆ.

ಮಕ್ಕಳ ಮರಣಗತಿಯನ್ನು ಕಡಿಮೆಗೊ ಳಿಸುವುದು, ಪೌಷ್ಟಿಕಾಂಶ ನೀಡಿಕೆ, ಕು ಟುಂಬದ ಆದಾಯ ಹೆಚ್ಚಿಸಲು ಮಹಿಳೆಯ ರಿಗೆ ಸೂಕ್ತ ಉಪಕರಣಗಳಿಗಾಗಿ ತರಬೇ ತಿ ಮತ್ತು ಹಣ ಸಹಾಯ—ಇವು ಈ ಯೋ ಜನೆಯಲ್ಲಿ ಸೇರಿವೆ.

ಸ್ವಾತಂತ್ರ ದಿನಾಚರಣೆ

ಜಯಪುರ

ಇಲ್ಲಿನ ಗ್ರಾಮ ಪಂಚಾಯ್ತಿ, ಸ|| ಪ್ರಾಢಶಾಲೆ, ಹಿ|| ಪ್ರಾ||ಶಾಲೆ ಹಾಗೂ ಕ್ರಿ ಸ್ತಪ್ರಭಾ ಕಾನ್ವೆಂಟ್‌ಗಳು ಸಂಯುಕ್ತವಾ ಗಿ ಸ್ವಾತಂತ್ರ್ಯೋತ್ಸವ ಆಚರಿಸಿದರು.

ಪಂಚಾಯ್ತಿ ಅಧ್ಯಕ್ಷ ಎ. ಸಿ. ವಜ್ರಪ್ಪ ಧ್ವಜಾರೋಹಣ ಮಾಡಿದರು. ಅಶ್ವತ್ಥನಾ ರಾಯಣ ಸ್ವಾಗತಿಸಿದರು. ಶೃಂಗೇರಿ ಕಾಲೇ ಜಿನಿಂದ ಅಂತಿಮ ಬಿಎಸ್ಸಿಯಲ್ಲಿ ರ್‍ಯಾಂಕ್ ಪಡೆದಹಳೆಯ ವಿದ್ಯಾರ್ಥಿ ಎಲ್. ಎಸ್. ಚಂ ದ್ರಶೇಖರ್‌ರನ್ನು ಸನ್ಮಾನಿಸಲಾಯಿತು. ಮುಖ್ಯೋಪಾಧ್ಯಾಯರು ಈತನ ಸಾಧನೆ ಹೊಗಳಿದರು.

ಹಿ. ಪ್ರಾ. ಶಾಲೆಯ ಮುಖ್ಯೋಪಾಧ್ಯಾ ಯರು ವಂದಿಸಿದರು. ಮಲ್ನಾಡ್ ರಿಕ್ರಿಯೇ ಶನ್ ಸೆಂಟರ್ ನವರು ಸಿಹಿ ಹಂಚಿದರು. ಸಮಾರಂಭದ ಅಂಗವಾಗಿ ಪುಷ್ಪಪ್ರದರ್ಶನ, ಚರ್ಚಾಸ್ಪರ್ಧೆ ಏರ್ಪಡಿಸಲಾಗಿತ್ತು.

(ವರದಿ: ಶಂ. ನ. ಶೇಷಗಿರಿ)

ಕಲ್ಲುಗುಡ್ಡೆ

ವಿವೇಕಾನಂದ ಯುವಕ ರೈತ ಸಂಘ, ಚೈತನ್ಯ ಮಹಿಳಾ ಸಮಾಜ, ಹಿರಿಯ ಮ ತ್ತು ಕಿರಿಯ ಪ್ರಾಥಮಿಕ ಶಾಲೆಗಳು ಒಟ್ಟಾ ಗಿ ಸ್ವಾತಂತ್ರ್ಯ ದಿನ ಆಚರಿಸಿದರು. ಎ. ಎಲ್. ನಾಗಭೂಷಣ್ ಅಧ್ಯಕ್ಷತೆ ವಹಿಸಿದ್ದ ರು. ಬಿ. ಎಸ್. ಹರಿಶ್ಚಂದ್ರ ಧ್ವಜಾರೋಹ ಣ ಮಾಡಿದರು. ಬಿ. ವಿ. ಲಕ್ಷ್ಮೀನಾರಾಯ ಣ್ ಮುಖ್ಯ ಅತಿಥಿ ಗಳಾಗಿದ್ದರು. ವರ್ದಪ್ಪ ಯ್ಯ, ಮಹಾಬಲರಾವ್, ರಾಮಯ್ಯ, ಲ ಕ್ಷ್ಮೀನಾರಾಯಣ್, ರಾಜಗೋಪಾಲ್ ಮಾ ತನಾಡಿದರು.

ಪುಟ್ಟಾಚಾರ್ ಸ್ವಾಗತಿಸಿ, ಶ್ರೀನಿವಾಸ್ ವಂದಿಸಿದರು.

ಬಿಲಗದ್ದೆ

ಇಲ್ಲಿ ನಡೆದ ಸ್ವಾತಂತ್ರ್ಯ ದಿನದ ಸಮಾ ರಂಭದಲ್ಲಿ ಕಾವಳಿ ಲಕ್ಷ್ಮೀನಾರಾಯಣಪ್ಪ ಧ್ವಜಾರೋಹಣ ಮಾಡಿದರು. ಟಿ. ಎಸ್. ಗಿರಿಯಪ್ಪ ನಾಯ್ಕರು ಅಧ್ಯಕ್ಷತೆ ವಹಿಸಿದ್ದರು ರೈತಸಂಘದ ಅಧ್ಯಕ್ಷ ಟಿ. ಎಸ್. ಹಾಲಪ್ಪ ನಾಯ್ಕ ಮತ್ತು ಇತರ ಸದಸ್ಯರು ಹಾಜರಿ ದ್ದರು. ಗೋವಿಂದರಾವ್ ಸ್ವಾಗತಿಸಿ, ವಿದ್ಯಾ ರ್ಥಿ ಕೆ. ಸಿ. ಶ್ರೀಕಂಠ ವಂದಿಸಿದರು.

ಇದೇ ಸಂದರ್ಭದಲ್ಲಿ ವಯಸ್ಕರ ಶಿಕ್ಷಣ ಕೇಂದ್ರದ ಉದ್ಘಾಟನೆಯ ಸಮಾರಂಭ ಗಿರಿ ಯಪ್ಪನಾಯ್ಕರ ಅಧ್ಯಕ್ಷತೆಯಲ್ಲಿ ನಡೆಯಿ ತು. ಕೇಂದ್ರದ ಶಿಕ್ಷಕ ಬಿ.ಎಸ್.ಕೃಷ್ಣಮೂ ರ್ತಿ ಸ್ವಾಗತ ಭಾಷಣ ಮಾಡಿ, ಶಿಕ್ಷಣ ಕೇಂದ್ರದ ಕುಂದು—ಕೊರತೆಗಳ ಬಗ್ಗೆ ಸಹ ಕಾರ ನೀಡುವಂತೆ ಊರ ಹಿರಿಯರಲ್ಲಿ ವಿನಂ ತಿಸಿದರು. ಜಿ.ಎಂ.ನಾಗರತ್ನ ವಂದಿಸಿದರು.

ಹಾಲ್ಮುತ್ತೂರು

ಇಲ್ಲಿನ ಹಿ. ಪ್ರಾ. ಶಾಲೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಪಂಚಾಯ್ತಿ ಉಪಾಧ್ಯಕ್ಷ ಹೆಚ್.ಡಿ.ಶ್ರೀನಿ ವಾಸ್ ಧ್ವಜ ಹಾರಿಸಿದರು. ಅಧ್ಯಕ್ಷ ಹೆಚ್. ವೈ. ಸೀತಾರಾಮಭಟ್ಟ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಚಂದ್ರಶೇಖರಯ್ಯ ಸ್ವಾಗತಿಸಿ ದರು. ಹೆಚ್.ಎಸ್.ಗೋಪಾಲಕೃಷ್ಣಯ್ಯ, ಅಧ್ಯಾಪಕ ಎಸ್. ಗಂಗಾಧರಯ್ಯ ಮಾತ ನಾಡಿದರು. ಅಧ್ಯಾಪಕಿ ಸಿ. ಗುಲಾಬಿ ವಂ ದಿಸಿದರು. ಹೆಚ್. ಡಿ. ಶ್ರೀನಿವಾಸ್ ಎಲ್ಲರಿ ಗೂ ಸಿಹಿ ಹಂಚಿದರು.

(ವರದಿ: ಹು. ಲ. ರಮಾನಂದ.)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ

ಹಾಲು ಉತ್ಪಾದಕರ ಸಹಕಾರ ಸಂಘ

ಬಿಳಲುಕೊಪ್ಪ: ಮೇಲ್ಕಂಡ ಸಂಘದ ಉ ದ್ಘಾಟನೆ ಇಲ್ಲಿ ಆ. ೧೦ ರಂದು ಹಾಸನ ಡೈ ರಿಯ ಮ್ಯಾ. ಡೈರೆಕ್ಟರ್ ಎಸ್.ಎಸ್.ನಾ ಯಕ್‌ರವರಿಂದ ನೆರವೇರಿತು. ದೀಪಕ್ ರಾಜ್, ರುದ್ರೇಶಪ್ಪ, ಡಾ. ಪಿ. ಬೀರಣ್ಣ ಹಾಗೂ ಬಸರಿಕಟ್ಟೆ ಸಿಂಡಿಕೇಟ್ ಬ್ಯಾಂಕ್ ಮ್ಯಾನೇಜರ್ ಎಂ. ಧನಂಜಯ ಮುಖ್ಯ ಅತಿಥಿಗಳಾಗಿದ್ದರು. ಕೊಪ್ಪ ಕ್ಷೇತ್ರಾಭಿವೃದ್ಧಿ ಅಧಿಕಾರಿ ಕೆ. ಬಾಲಣ್ಣ ಗೌಡ ಅಧ್ಯಕ್ಷತೆ ವಹಿಸಿದ್ದರು.

ಸಂಘದ ಮುಖ್ಯ ಪ್ರವರ್ತಕ ಬಿ.ಎನ್ ವಾಸುದೇವಮೂರ್ತಿ ಸ್ವಾಗತಿಸಿ ಕೆ.ವೆಂಕಟ ರಮಣ ಉಡುಪ ವಂದಿಸಿದರು.

ಈ ಹಾಲು ಉತ್ಪಾದಕರ ಸಹಕಾರ ಸಂ ಘ ಕೊಪ್ಪ ತಾ|| ನಲ್ಲಿಯೇ ಮೊದಲನೆಯ ದಾಗಿದೆ.